ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯ
**Karnataka State Rural Development and Panchayat Raj University**
ರೈತ ಭವನ, ಜನರಲ್ ಕಾರಿಯಪ್ಪ ವೃತ್ತ, ಗದಗ– 582 101
Raitha Bhavana, General Cariappa Circle, Gadag – 582 101
E-mail: ksrdpru@gmail.com Phone: 08372-230338, Fax: 08372-297343

ದಿನಾಂಕ 06-07-2019 ಶನಿವಾರದಂದು ಬೆಳಗ್ಗೆ 11.00 ಗಂಟೆಗೆ ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯ, ಗದಗದಲ್ಲಿ ಸಭಾ ಭವನದಲ್ಲಿ ಜರುಗಿದ ಕಾರ್ಯನಿರ್ವಾಹಕ ಪರಿಷತ್ತಿನ ವಿಶೇಷ ಸಭೆಯ ನಡವಳಿಗಳು

## PROCEEDINGS OF THE SPECIAL MEETING OF THE EXECUTIVE COUNCIL HELD ON 06-07-2019 IN THE MEETING HALL, KSRDPR UNIVERSITY, GADAG

**MEMBERS PRESENT:**

1. Prof. Dr. B. Thimme Gowda — Chairperson
   Vice Chancellor, KSRDPRU,

2. Prof. Dr. R.S. Deshpande, — Member
   Former Director, Institute for Social and Economic Change (ISEC),
   No. 405, 5th Main, 10th Cross, Teachers' Colony,
   Nagarabhavi, Bengaluru-72

3. Shri G. B. Shivaraj, — Member
   Vice-President, Gandhi Bhavan,
   #181, Lakshmi Nivas, 2nd B Main Road, 6th Cross,
   9th Block, Nagarbhavi 2nd Stage, Bengaluru-72.

4. Shri B.G. Govindappa, Ex-MLA, — Member
   Belaguru Village & Post,
   Srirampura Hobli, Hosadugra – 577 527.

5. Shri Abdul Hakim, — Member
   Social Worker, Educationist and Writer,
   #3078, 1st Cross, Gayathrinagar, Bengaluru-21.

6. Dr. N. Sivanna, — Member
   Director (I/c), Centre for Research, Innovation and
   Evaluation, KSRDPR University, Gadag

7. Prof. Dr. K.M. Hanumantharayappa, — Member
   Principal & Dean, Faculty of Law (Retd.) and
   Former Member, Karnataka State Law Commission,
   presently residing in Guntur, A.P.

8. Dr. Prakash Bhat, — Member
   Former C.E.O., Society for Community Participation and
   Empowerment (SCOPE), No.19, Bayalu, Hoysala Nagar,
   Haliyala Road, Dharwad-580 003.

B. Thimmegowda

9. Prof. Dr. Suresh V. Nadagoudar
Registrar, KSRDPR University, Gadag — Ex-officio Member Secretary

**MEMBERS NOT PRESENT:**

1. Dr. Arun R. Patil,
   Adhiti, Adhyapakara Nagara, Hulkoti-582 205.

2. Prof. T.V. Kattimani,
   Vice Chancellor, Indira Gandhi National Tribal University,
   Anuppur Dist. M.P.

3. Smt. N. Jamuna Urs,
   Home Scientist (Retd.), J.S.S. KVK, Mysuru,
   # 904/7, 3rd Main Road, 1st Cross,
   Vidyaranyapuram, Mysuru-570 008.

4. The Vice Chancellor, UAS, Bengaluru

5. The Vice Chancellor, VTU, Belagavi.

6. The Principal Secretary to Government,
   Rural Development and Panchayat Raj Department
   Govt. of Karnataka, Bengaluru.

7. The Principal Secretary to Government,
   Department of Agriculture, Govt. of Karnataka, Bengaluru.

8. The Principal Secretary to Government,
   Department of Social Welfare, Govt. of Karnataka, Bengaluru

9. The Principal Secretary to Government,
   Labour Department, Govt. of Karnataka, Bengaluru

10. The Principal Secretary to Government,
    Health Department, Govt. of Karnataka, Bengaluru.

ಕುಲಸಚಿವರು ವಿಶೇಷ ಸಭೆಯಲ್ಲಿ ಹಾಜರಿದ್ದ ಎಲ್ಲಾ ಸದಸ್ಯರನ್ನು ಆತ್ಮೀಯವಾಗಿ ಸ್ವಾಗತಿಸಿ ಸಭೆಯನ್ನು ನಡೆಸಿಕೊಡಲು ಕುಲಪತಿಗಳನ್ನು ಕೋರಿದರು. ಕುಲಪತಿಗಳು ಸದಸ್ಯರನ್ನು ಸ್ವಾಗತಿಸಿ ಕಾರ್ಯಸೂಚಿಯನ್ನು ಪರಿಗಣನೆಗೆ ತೆಗೆದುಕೊಂಡರು.

The Registrar extended a warm welcome to all the members present in the Special meeting of the Executive Council and requested the Vice Chancellor to conduct the Proceedings. The Vice Chancellor welcoming the members took up the agenda for consideration.

**ವಿಷಯ ಸಂ.1: ದಿನಾಂಕ 01-07-2019ರಂದು ಆಯೋಜಿಸಲಾಗಿರುವ ಹಣಕಾಸು ಸಮಿತಿ ಸಭೆಯ ನಡವಳಿಗಳನ್ನು ಪರಿಗಣಿಸುವ ಬಗ್ಗೆ.**

**ಅಜೆಂಡಾ ಸಂ 1. ಆಯ್ಯವ್ಯಯ ಮರು ಹಂಚಿಕ ಕುರಿತು ಹಣಕಾಸು ಸಮಿತಿಯ ನಡಾವಳಿಗಳು ಪರಿಗಣಿಸುವುದು.**

ವಿಶ್ವವಿದ್ಯಾಲಯದ ಸ್ಥಾಪನೆಯು ಒಂದು ನವೀನ ಪ್ರಯೋಗವಾಗಿದ್ದು, ಇದರಿಂದ ಗ್ರಾಮೀಣ/ಬಡ ಜನರ/ವಿದ್ಯಾರ್ಥಿಗಳ ಸೃಜನಾತ್ಮಕತೆ ವೃದ್ಧಿಯಾಗಿ ಅವರು ಸ್ವ-ಉದ್ಯೋಗಿಗಳಾಗುವಂತೆ ಮಾಡುವುದರೊಂದಿಗೆ ಸಮಾಜದ ಸರ್ವಾಂಗೀಣ ಅಭಿವೃದ್ಧಿಗೆ ನಾಂದಿಯಾಗುತ್ತದೆ.

ಮುಂದುವರಿದು, ಯು.ಜಿ.ಸಿ ಯಿಂದ ಅನುದಾನ ಪಡೆಯಬೇಕಾದರೆ ಅದರ 12(B) ಅಡಿಯಲ್ಲಿ ಮಾನ್ಯತೆ ಪಡೆಯಬೇಕು. ಈ ಮಾನ್ಯತೆ ಪಡೆದು ಅನುದಾನ ಪಡೆದುಕೊಳ್ಳಲು ನ್ಯಾಕ್ ನಿಂದ ಮಾನ್ಯತೆ (Accreditation) ಪಡೆಯುವುದು ಕಡ್ಡಾಯವಾಗಿರುತ್ತದೆ. ನ್ಯಾಕ್ ಮಾನ್ಯತೆ ಪಡೆಯಲು ಕನಿಷ್ಠ ಮೂಲ ಸೌಕರ್ಯಗಳನ್ನು ಹೊಂದುವುದು ಮತ್ತು ಸಿಬ್ಬಂದಿಗಳ ನೇಮಕ ಮಾಡುವುದು ಅವಶ್ಯಕವಾಗಿದೆ. ಹೀಗಾಗಬೇಕಾದರೆ ಇನ್ನು ಎರಡು ಮೂರು ವರ್ಷಗಳಲ್ಲಿ ಐದು ಶಾಲೆಗಳಿಗೂ ಕಟ್ಟಡಗಳು, ಗ್ರಂಥಾಲಯ ಕಟ್ಟಡ, ಬಾಲಕ ಬಾಲಕೀಯರ ವಸತಿ ನಿಲಯಗಳು, ನೌಕರರ ವಸತಿ ಗೃಹಗಳು ಹಾಗೂ ಕ್ಯಾಂಪಸ್ ಆವರಣದ ಅಭಿವೃದ್ಧಿ ಮಾಡಲೇಬೇಕಾದ ಅನಿವಾರ್ಯತೆಯಿದೆ.

ಮೇಲಾಗಿ ಹೊಸ ನಿಯಮಗಳ ಪ್ರಕಾರ ವಿಶ್ವವಿದ್ಯಾಲಯಕ್ಕೆ ಯು.ಜಿ.ಸಿ ಮಾನ್ಯತೆ ಮುಂದುರಿಯಬೇಕಾದರೆ ನ್ಯಾಕ್ ಮಾನ್ಯತೆ (Accreditation) ಕಡ್ಡಾಯವಾಗಿದೆ. ಹಾಗಾಗಿ ಈಗ ಪ್ರಾರಂಭಿಸಿರುವ ಒಂದು ಶಾಲಾ ಕಟ್ಟಡದ ಜೊತೆಗೆ ಅನಿವಾರ್ಯವಾಗಿ ಮತ್ತೆರಡು ಶಾಲಾ ಕಟ್ಟಡಗಳ ಕಾಮಗಾರಿಯನ್ನು ಆದಷ್ಟು ಬೇಗ ಪ್ರಾರಂಭಿಸಬೇಕಾಗಿದೆ. ಹಾಗೂ ಉಳಿದೆರಡು ಶಾಲಾ ಕಟ್ಟಡಗಳ ಕಾಮಗಾರಿಯನ್ನು ಮುಂದಿನ ವರ್ಷ ಕೈಗೊಂಡು, ಇನ್ನು ಎರಡು ಮೂರು ವರ್ಷಗಳಲ್ಲಿ ಐದು ಶಾಲಾ ಕಟ್ಟಡಗಳ ಮತ್ತು ಇತರ ಕಟ್ಟಡಗಳ ಕಾಮಗಾರಿಯನ್ನು ಪೂರ್ಣಗೊಳಿಸುವುದು ಅನಿವಾರ್ಯವಾಗಿದೆ. ಇಲ್ಲದಿದ್ದರೆ ವಿಶ್ವವಿದ್ಯಾಲಯಕ್ಕೆ ನ್ಯಾಕ್ ಮಾನ್ಯತೆ ಪಡೆಯುವುದು ಬಹಳ ಕಷ್ಟವಾಗುತ್ತದೆ ಹಾಗೂ ಯು.ಜಿ.ಸಿ ಮಾನ್ಯತೆ ಕಳೆದುಕೋಳ್ಳುವ ಭೀತಿ ಇದೆ ಹಾಗೂ ಕೇಂದ್ರ ಸರ್ಕಾರದ ಆರ್ಥಿಕ ಮೂಲಗಳಿಂದ ಸಹಾಯ ಪಡೆದು, ವಿಶ್ವವಿದ್ಯಾಲಯದ ಮುಂದಿನ ಅಭಿವೃದ್ಧಿ ಸಾಧಿಸಲು ಸಾದ್ಯವಾಗುವುದಿಲ್ಲ. ಈ ಕಾರಣಗಳಿಗಾಗಿ ವಿಶ್ವವಿದ್ಯಾಲಯದಲ್ಲಿ ಮೂಲ ಸೌಕರ್ಯಗಳನ್ನು ಅನಿವಾರ್ಯವಾಗಿ ಸೃಷ್ಟಿಸಬೇಕಾಗಿದೆ ಮತ್ತು ಸಿಬ್ಬಂದಿಗಳ ನೇಮಕವಾಗಬೇಕಾಗಿದೆ.

ನೂತನ ಕ್ಯಾಂಪಸ್‌ನಲ್ಲಿ ಅತ್ಯಂತ ಅವಶ್ಯಕವಾಗಿ ಬೇಕಾದ ಕಟ್ಟಡಗಳ ಕಾಮಗಾರಿಗಳನ್ನು ಪ್ರಾರಂಭಿಸಲಾಗಿದೆ. ಇಲ್ಲಿಯವರೆಗೆ ಆವರಣದಲ್ಲಿ ಒಂದು ಶಾಲಾ ಕಟ್ಟಡ, ಒಂದು ಬಾಲಕರ ವಸತಿ ನಿಲಯ ಮತ್ತು ಭೋಜನಾಲಯ ಹಾಗೂ ಸಬರಮತಿ ಆಶ್ರಮದ ಪ್ರತಿಕೃತಿ ಕಟ್ಟಡಗಳ ಕಾಮಗಾರಿಗಳು ಪ್ರಾರಂಭವಾಗಿರುತ್ತವೆ. ಈ ನಾಲ್ಕು ಕಾಮಗಾರಿಗಳ ಒಟ್ಟು ಟೆಂಡರ್ ಅಂದಾಜು ಮೊತ್ತ ರೂ. 21,24,18,395 ಆಗಿರುತ್ತದೆ. ಜೊತೆಗೆ, ತರಬೇತಿ ಕೇಂದ್ರ ಕಟ್ಟಡ ಕಾಮಗಾರಿಯು ಅತ್ಯಂತ ಅವಶ್ಯವಾಗಿದ್ದುದರಿಂದ ಕಟ್ಟಡದ ಒಟ್ಟಾರೆ ಕಾಮಗಾರಿಯ ಅಂದಾಜು ಮೊತ್ತ 16.15 ಕೋಟಿಗಳ ಅಂದಾಜು ಪಟ್ಟಿಗೆ ಸರ್ಕಾರದಿಂದ ಆಡಳಿತಾತ್ಮಕ ಮಂಜೂರಾತಿ ಪಡೆದುಕೊಂಡು, ತರಬೇತಿ ಕೇಂದ್ರದ ಕಾಮಗಾರಿಯ ಟೆಂಡರ ಪ್ರಕ್ರೀಯೆಯನ್ನು ಪೂರ್ಣಗೊಳಿಸಲಾಗಿರುತ್ತದೆ. ಸದರಿ ಕಟ್ಟಡದ ಕಾಮಗಾರಿಯು ಅಂದಾಜು ರೂ. 13,54,21,508 ಮೊತ್ತದ್ದಾಗಿರುತ್ತದೆ. ಒಂದು ಬಾಲಕಿಯರ ವಸತಿ ನಿಲಯ ಕಟ್ಟಡ ಕಾಮಗಾರಿಗೆ ಸರ್ಕಾರದ ಆಡಳಿತಾತ್ಮಕ ಮಂಜೂರಾತಿ ಪಡೆದಿದ್ದು, ಟೆಂಡರ್ ಕರೆಯಲು ಕ್ರಮ ಜರುಗಿಸಲಾಗುತ್ತಿದೆ. ಇದರ ವೆಚ್ಚ ರೂ. 9,45,66,767 ಗಳಾಗಿರುತ್ತದೆ. ಮೇಲಿನ ಎಲ್ಲ ಕಾಮಗಾರಿಗಳ ಅಂದಾಜು ಒಟ್ಟು ಮೊತ್ತ ರೂ. 44,24,06,670 ಗಳಾಗಿರುತ್ತದೆ (ಪಟ್ಟಿ-2 ನೋಡಿ).

B. Umamegowda

2016–17, 2017–18, 2018–19, 2019–20ನೇ ಸಾಲಿನ ಆಯವ್ಯಯದಲ್ಲಿ ನಿಗದಿಪಡಿಸಿದಂತೆ ಪ್ರಸ್ತುತ ಒಟ್ಟು ರೂ. 35.00 ಕೋಟಿ ಅನುದಾನ ಲಭ್ಯವಿದ್ದು, ವಿದ್ಯಾರ್ಥಿಗಳಿಂದ ಶುಲ್ಕ ರೂಪದಲ್ಲಿ ಪಡೆದಿರುವ ಹಣ ಮತ್ತು ಬ್ಯಾಂಕಿನಲ್ಲಿರುವ ಹಣಕ್ಕೆ ಬಡ್ಡಿ ರೂಪದಲ್ಲಿ ಬಂದಿರುವ ಹಣ ಇತ್ಯಾದಿ ಒಟ್ಟು ಮಾಡಿ ಸುಮಾರು ರೂ. 40.00 ಕೋಟಿ ಲಭ್ಯವಿರುತ್ತದೆ.

ಮುಂದುವರೆದು, ವಿಶ್ವವಿದ್ಯಾಲಯಕ್ಕೆ ಅತಿ ಅವಶ್ಯಕವಾದ ಕಾಮಗಾರಿಗಳಿಗೆ ಮಿತಿಗೊಳಿಸಿ ಒಟ್ಟು ಅಂದಾಜು ಮೊತ್ತ ರೂ. 241.67 ಕೋಟಿಗಳಿಗೆ ಪ್ರಸ್ತಾವನೆಯನ್ನು ತಯಾರಿಸಿ ಸರ್ಕಾರಕ್ಕೆ ಸಲ್ಲಿಸಲಾಗಿತ್ತು. ಅದರಂತೆ ಅಂದಾಜು ಪಟ್ಟಿಗಳಿಗೆ ಆಡಳಿತಾತ್ಮಕ ಅನುಮೋದನೆ ಹಾಗೂ ಮೊದಲನೇ ಹಂತದಲ್ಲಿ ನಿರ್ಮಿಸಲಾಗುವ ಕಟ್ಟಡಗಳಿಗೆ ರೂ. 109.43 ಕೋಟಿ ಅನುದಾನವನ್ನು ಬಿಡುಗಡೆ ಮಾಡಲು ಸರ್ಕಾರಕ್ಕೆ ಕೋರಲಾಗಿತ್ತು, ಇದಕ್ಕೆ ಉತ್ತರವಾಗಿ, ಸರ್ಕಾರದ ಕಾರ್ಯದರ್ಶಿಗಳ ಪರವಾಗಿ ಸಭೆಯಲ್ಲಿ ಭಾಗವಹಿಸಿದ್ದ ವಿಶೇಷಾಧಿಕಾರಿಗಳು ಇಂದಿನ ಆರ್ಥಿಕ ಪರಿಸ್ಥಿತಿಯಲ್ಲಿ ಎಲ್ಲಾ ಕಟ್ಟಡ ಕಾಮಗಾರಿಗಳನ್ನು ಒಟ್ಟಿಗೆ ಪ್ರಾರಂಭಿಸಿ ಅದಕ್ಕೆ ಬೇಕಾಗುವಷ್ಟು ಅನುದಾನ ಬಿಡುಗಡೆಗೊಳಿಸುವುದು ಕಷ್ಟಸಾಧ್ಯವೆಂದು, ಪರಿಸ್ಥಿತಿಗೆ ಅನುಗುಣವಾಗಿ ಅತಿಅವಶ್ಯವಾಗಿ ಬೇಕಾಗಿರುವ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳುವುದು ಸೂಕ್ತ ಎಂದು ಅಭಿಪ್ರಾಯಪಟ್ಟರು.

ಸಾಮಾನ್ಯ ವೆಚ್ಚ ಮತ್ತು ವಿವಿಧ ಶಾಲೆಗಳ ವಿಭಾಗಗಳಿಗೆ ಅವುಗಳ ಪ್ರಯೋಗಾಲಯಗಳಿಗೆ ಹಾಗೂ ಗ್ರಂಥಾಲಯಕ್ಕೆ ಬೇಕಾದ ಪೀಠೋಪಕರಣಗಳನ್ನು ಮತ್ತು ಇತರ ಮೂಲ ಸೌಕರ್ಯಗಳನ್ನು ಕಲ್ಪಿಸಲು ವಿಶ್ವವಿದ್ಯಾಲಯಕ್ಕೆ ಹಣ ಒದಗಿಸಲಾಗಿತ್ತು. ಆದರೆ ಬಂಡವಾಳ ವೆಚ್ಚದಡಿ ಸಾಕಷ್ಟು ಹಣ ದೊರೆಯದೇ ಕಟ್ಟಡಗಳನ್ನು ಕಟ್ಟಲಾಗಿಲ್ಲ. ಹಾಗಾಗಿ ಈ ವೆಚ್ಚದಡಿಯಲ್ಲಿನ ಅನುದಾನ ಸಂಪೂರ್ಣವಾಗಿ ಬಳಕೆಯಾಗಿರುವುದಿಲ್ಲ. ವಿಶ್ವವಿದ್ಯಾಲಯಕ್ಕೆ ಮೊದಲು ಬಂಡವಾಳ ವೆಚ್ಚದಡಿ ಸಾಕಷ್ಟು ಅನುದಾನ ಬೇಕಾಗುತ್ತದೆ. ನಂತರ ಸಾಮಾನ್ಯ ಮತ್ತು ಇತರ ವೆಚ್ಚಗಳಿಗೆ ಸಾಕಷ್ಟು ಹಣ ಬೇಕಾಗುತ್ತದೆ. ಆದುದರಿಂದ ಸಾಮಾನ್ಯ ವೆಚ್ಚದಲ್ಲಿ ಈಗ ಉಳಿತಾಯವಾಗಿರುವ ಸುಮಾರು ರೂ. 20 ಕೋಟಿಯನ್ನು ಬಂಡವಾಳ ವೆಚ್ಚಕ್ಕೆ ವರ್ಗಾಯಿಸಿ, ಕೊನೇಪಕ್ಷ ಇನ್ನೂ ಒಂದು ಶಾಲಾ ಕಟ್ಟಡದ ಕಾಮಗಾರಿಯನ್ನಾದರೂ ಪ್ರಾರಂಭಿಸುವುದು ಅನಿವಾರ್ಯವಾಗಿದೆ. ಮುಂದಿನ ವರ್ಷಗಳಲ್ಲಿ ಬಂಡವಾಳ ವೆಚ್ಚಗಳಿಗಾಗಿ ಬಂದ ಅನುದಾನದಿಂದ ಈ ಹಣವನ್ನು ಸಾಮಾನ್ಯ ವೆಚ್ಚ ಮತ್ತು ಇತರ ವೆಚ್ಚಗಳಿಗೆ ಹಿಂದುರಗಿಸಬಹುದಾಗಿದೆ. ಹಾಗಾಗಿ ಆಯವ್ಯಯದ ಮರು ಹಂಚಿಕೆ ಪ್ರಸ್ತಾವನೆಯನ್ನು ಹಣಕಾಸು ಸಮಿತಿಯ ಪರಿಗಣನೆಗೆ ಮಂಡಿಸಲಾಗಿತ್ತು.

ಸದ್ಯಕ್ಕೆ ವಿಶ್ವವಿದ್ಯಾಲಯಕ್ಕೆ ತನ್ನದೇ ಆದ ಸ್ವಂತ ಕಟ್ಟಡ ಮತ್ತು ಮೂಲ ಸೌಕರ್ಯಗಳು ಇಲ್ಲದಿರುವುದರಿಂದ ಶೈಕ್ಷಣಿಕ ಚಟುವಟಿಕೆಗಳು, ತರಬೇತಿ ಕಾರ್ಯಕ್ರಮಗಳು ಇತ್ಯಾದಿಗಳನ್ನು ಪೂರ್ಣಪ್ರಮಾಣದಲ್ಲಿ ಜರುಗಿಸಲಾಗಿಲ್ಲ. ಆದುದರಿಂದ ರಾಜಸ್ವ ವೆಚ್ಚದ ಲೆಕ್ಕ ಶೀರ್ಷಿಕೆಯಡಿಯ ಅನುದಾನವನ್ನು ಪೂರ್ಣವಾಗಿ ಖರ್ಚು ಮಾಡಲಾಗದೇ, ಹಣ ಉಳಿದಿರುವುತ್ತದೆ. ಆದಕಾರಣ ಸದರಿ ಅನುದಾನವನ್ನು ಬಂಡವಾಳ ವೆಚ್ಚಕ್ಕೆ ಆಯವ್ಯಯ ಮರುಹಂಚಿಕೆ ಮಾಡಬಹುದಾಗಿದೆ. ಹಾಗಾಗಿ ನ್ಯಾಕ್ ಹಾಗೂ ಯು.ಜಿ.ಸಿ ಯಿಂದ 12(B) ಅಡಿಯಲ್ಲಿ ಮಾನ್ಯತೆ ಪಡೆಯುವತ್ತ ಮೂಲ ಸೌಕರ್ಯಗಳ ಅವಶ್ಯಕತೆಯಿರುವುದರಿಂದ, ಸದರಿ ಮರುಹಂಚಿಕೆ ಮಾಡುವುದಕ್ಕೆ ಹಣಕಾಸು ಸಮಿತಿಯು ಸರ್ವಾನುಮತದಿಂದ ಅನುಮೋದಿಸಿದೆ.

ಹಾಗಾಗಿ ಮರುಹಂಚಿಕೆ ವಿಷಯವನ್ನು ಕಾರ್ಯನಿರ್ವಾಹಕ ಪರಿಷತ್ತಿನ ಪರಿಗಣನೆಗೆ ಮಂಡಿಸಲಾಗಿದೆ.

## ನಿರ್ಣಯ

ವಿಷಯವನ್ನು ಸುಧೀರ್ಘವಾಗಿ ಚರ್ಚಿಸಲಾಯಿತು. ಪರಾಮರ್ಶನ ಟಿಪ್ಪಣಿಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಹಾಗೂ ಹಣಕಾಸು ಸಮಿತಿಯ ಶಿಫಾರಸಿನಂತೆ ರಾಜಸ್ವ ವೆಚ್ಚದ ಲೆಕ್ಕ ಶೀರ್ಷಿಕೆಯಡಿ ಲಭ್ಯವಿರುವ ಸಾಮಾನ್ಯ ವೆಚ್ಚಗಳಲ್ಲಿ ಉಳಿತಾಯವಾಗಿರುವ ಸುಮಾರು ರೂ. 20.00 ಕೋಟಿಯನ್ನು ಬಂಡವಾಳ ವೆಚ್ಚಕ್ಕೆ ವರ್ಗಾಯಿಸಿ ಆಯವ್ಯಯ ಮರು ಹಂಚಿಕೆ ಮಾಡಿ ಒಂದು ಶಾಲಾ ಕಟ್ಟಡ ಹಾಗೂ ಇತರ ತುರ್ತು ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ಕಾರ್ಯನಿರ್ವಾಹಕ ಪರಿಷತ್ತು ನಿರ್ಣಯಿಸಿ ಅನುಮೋದಿಸಿತು.

**RESOLUTION**

The Executive Council had a detailed discussion on the issue. In the light of the details explained in the reference note, it was resolved to approve re-appropriation of funds out of savings from General Expenditure to Capital Expenditure to the tune of about Rs. 20.00 Crores as per the recommendations of the Finance Committee and to take up the construction of one more school building and other urgent works.

**ಅಜೆಂಡಾ ಸಂ 2. 2019-20 ನೇ ಸಾಲಿನ ಆಯ್ಯವ್ಯಯ ಹಂಚಿಕ ಕುರಿತು.**

2019-20 ನೇ ಸಾಲಿಗಾಗಿ ಸರ್ಕಾರದಿಂದ ಈ ಕೆಳಗಿನ ಲೆಕ್ಕ ಶಿರ್ಷಿಕೆಗಳಲ್ಲಿ ಅನುದಾನಗಳನ್ನು ನಿಗಧಿಪಡಿಸಲಾಗಿದೆ.

1. ಶಾಸನಬದ್ಧ ಅಧಿಕಾರಿಗಳ ವೇತನಕ್ಕಾಗಿ (2515-00-102-0-13-101) ರೂ. 96.00 ಲಕ್ಷ
2. ಗುತ್ತಿಗೆ / ಹೊರಗುತ್ತಿಗೆ ಸಿಬ್ಬಂದಿಗಳ ವೇತನಕ್ಕಾಗಿ (2515-00-102-0-13-115) ರೂ. 290.00 ಲಕ್ಷ
3. ಸಾಮಾನ್ಯ ವೆಚ್ಚಕ್ಕಾಗಿ (2515-00-102-0-13-103) ರೂ. 1587.00 ಲಕ್ಷ
4. ಬಂಡವಾಳ ವೆಚ್ಚ (4515-00-101-0-01-132) ರೂ. 1000.00 ಲಕ್ಷ

**ನಿರ್ಣಯ**

2019–20ನೇ ಸಾಲಿಗೆ ಸರ್ಕಾರದಿಂದ ಮಂಜೂರಾಗಿರುವ ಅನುದಾನದಿಂದ ವಿವಿಧ ಶೀರ್ಷಿಕೆಗಳಿಗೆ ನಿಗಧಿಪಡಿಸಿರುವ ಅನುದಾನದ ವಿವರಗಳನ್ನು ಕಾರ್ಯನಿರ್ವಾಹಕ ಪರಿಷತ್ತು ಗಮನಿಸಿತು ಹಾಗೂ ಸಾಮಾನ್ಯ ವೆಚ್ಚಕ್ಕಾಗಿ ನೀಡಿದ ಅನುದಾನವನ್ನು ವಿಶ್ವವಿದ್ಯಾಲಯದ ವಿವಿಧ ಚಟುವಟಿಕೆಗಳನ್ನು ನಿರ್ವಹಿಸಲು ಹಂಚಿಕೆ ಮಾಡಿರುವುದನ್ನು ಪರಿಶೀಲಿಸಿ ಅನುಮೋದಿಸಿತು.

**RESOLUTION**

The Executive Council noted the details of allocation of grants received from Government to different heads of accounts as stated in the agenda note and also approved the allocation of funds under General expenditure to different sub-heads to carry out various activities of the University.

**ವಿಷಯ ಸಂಖ್ಯೆ 3: ವಿಶ್ವವಿದ್ಯಾಲಯಕ್ಕೆ ಇನ್ನೊಂದು ಮಿನಿ ಬಸ್ ಖರೀದಿಸುವ ಬಗ್ಗೆ.**

**ಪರಮಾರ್ಷನ ಟಿಪ್ಪಣಿ**

ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ವಿಶ್ವವಿದ್ಯಾಲಯವು 2017–18ನೇ ಶೈಕ್ಷಣಿಕ ಸಾಲಿನಿಂದ ಕಾರ್ಯರಂಭ ಮಾಡಿದ್ದು ಏಳು ಸ್ನಾತಕೋತ್ತರ ಕೋರ್ಸುಗಳನ್ನು ಪ್ರಾರಂಭಿಸಲಾಗಿದೆ. ಹಾಗೂ ಸುಮಾರು 300 ವಿದ್ಯಾರ್ಥಿಗಳು ಅಧ್ಯಯನ ಮಾಡುತ್ತಿದ್ದಾರೆ.

ಹೀಗೆ ಪ್ರಾರಂಭಿಸಿರುವ ಎಲ್ಲಾ ಕೋರ್ಸುಗಳ ಪಠ್ಯಕ್ರಮಗಳಲ್ಲಿ ಕ್ಷೇತ್ರ ಕಾರ್ಯಚಟುವಟಿಕೆಗಳು (Field work) ಕಡ್ಡಾಯವಾಗಿದ್ದು ಸರದಿಯ ಮೇಲೆ ವಿದ್ಯಾರ್ಥಿಗಳು ಸಾಮಾನ್ಯವಾಗಿ ಪ್ರತಿ ದಿನ ವಿವಿಧ ಗ್ರಾಮೀಣ ಪ್ರದೇಶಗಳಿಗೆ ಭೇಟಿ ನೀಡಿ ಕ್ಷೇತ್ರ ಕಾರ್ಯ ನಡೆಸಬೇಕಾಗುತ್ತದೆ. ಅಲ್ಲದೇ ಗದಗದಲ್ಲಿ ವಿಶ್ವವಿದ್ಯಾಲಯಕ್ಕೆ ಹೊಸ ಆವರಣ ನಿರ್ಮಾಣವಾಗುವವರೆಗೆ ತಾತ್ಕಾಲಿಕವಾಗಿ ಬಾಡಿಗೆಯ ಆಧಾರದಲ್ಲಿ ಮೂರು ಕಡೆ ಕಟ್ಟಡಗಳನ್ನು ಪಡೆದು ತರಗತಿಗಳನ್ನು



B. Thimmegowda

ನಡೆಸಲಾಗುತ್ತಿದೆ. ಹಾಗೂ ಪುರುಷ ಹಾಗೂ ಮಹಿಳಾ ವಸತಿ ನಿಲಯಗಳ ಸೌಲಭ್ಯವನ್ನು ಸಹ ಬಾಡಿಗೆ ಮೇಲೆ ಪಡೆದು ವ್ಯವಸ್ಥೆ ಕಲ್ಪಿಸಲಾಗಿದೆ. ಈ ಉದ್ದೇಶಕ್ಕಾಗಿ ವಿದ್ಯಾರ್ಥಿಗಳು ಮತ್ತು ಅಧ್ಯಾಪಕರಿಗೆ ವಿಶ್ವವಿದ್ಯಾಲಯದ ವತಿಯಿಂದ ವಾಹನ ವ್ಯವಸ್ಥೆ ಮಾಡಬೇಕಾಗಿದೆ.

ಈಗಾಗಲೇ ಈ ಉದ್ದೇಶಕ್ಕಾಗಿ ಕಳೆದ ವರ್ಷ ಒಂದು ಮಿನಿ ಬಸ್ ಅನ್ನು ಸರ್ಕಾರದ ಅನುಮತಿ ಪಡೆದು ಖರೀದಿಸಲಾಗಿದೆ. ಈಗಿರುವ ಕೋರ್ಸುಗಳ ಜೊತೆಗೆ ಇನ್ನೂ ಕೆಲವು ಹೊಸ ಸ್ನಾತಕೋತ್ತರ ಕೋರ್ಸುಗಳನ್ನು 2019–20ನೇ ಶೈಕ್ಷಣಿಕ ಸಾಲಿನಿಂದ ಪ್ರಾರಂಭಿಸಲು ಉದ್ದೇಶಿಸಿ ಅರ್ಜಿ ಆಹ್ವಾನಿಸಲಾಗಿದೆ. ಈ ಎಲ್ಲಾ ಕೋರ್ಸುಗಳಿಗೆ ಪ್ರವೇಶ ಪಡೆಯುವ ಸುಮಾರು 500 ರಿಂದ 600 ವಿದ್ಯಾರ್ಥಿಗಳಿಗೆ ವಿದ್ಯಾರ್ಥಿಗಳ ಶೈಕ್ಷಣಿಕ ಚಟುವಟಿಕೆಗಳಿಗಾಗಿ, ಕ್ಷೇತ್ರ ಕಾರ್ಯಗಳಿಗೆ, ವಿವಿಧ ಗ್ರಾಮೀಣ ಪ್ರದೇಶಗಳಿಗೆ ಸಮುದಾಯ ಅಭಿವೃದ್ಧಿ, ಸೇವೆ ಮತ್ತು ಆರೋಗ್ಯ ಕುರಿತು ಅಧ್ಯಯನ ಮತ್ತು ಸಂಶೋಧನೆ ಕೈಗೊಳ್ಳಲು ಹಾಗೂ ಗ್ರಾಮೀಣ ಜನರಲ್ಲಿ ಅವುಗಳ ಕುರಿತು ಅರಿವು ಮೂಡಿಸಲು ಹೋಗಿ ಬರಲು ಒಂದು ಮಿನಿ ಬಸ್ ಸಾಕಾಗುವುದಿಲ್ಲ. ವಾಹನವನ್ನು ಬಾಡಿಗೆಯ ಮೇಲೆ ತೆಗೆದುಕೊಳ್ಳುವುದು ಆರ್ಥಿಕವಾಗಿ ದುಭಾರಿಯಾಗಲಿದೆ. ಹಾಗಾಗಿ ಈ ಉದ್ದೇಶಗಳಿಗಾಗಿ ವಿಶ್ವವಿದ್ಯಾಲಯಕ್ಕೆ ಕನಿಷ್ಠ 30–35 ಸೀಟುಗಳ ಇನ್ನೊಂದು EICHER ಕಂಪನಿಯ ಮಿನಿ ಬಸ್ ಅನ್ನು ಖರೀದಿಸುವುದು ಅತ್ಯವಶ್ಯಕವಾಗಿದೆ. ಇದಕ್ಕಾಗಿ ಸುಮಾರು ರೂ. 20.00 ಲಕ್ಷ (ತೆರಿಗೆ ಹೊರತುಪಡಿಸಿ) ವೆಚ್ಚವಾಗಲಿದೆ. ಈ ವೆಚ್ಚವನ್ನು ವಿಶ್ವವಿದ್ಯಾಲಯಕ್ಕೆ ರಾಜ್ಯ ಸರ್ಕಾರ ಒದಗಿಸಿರುವ ಅನುದಾನದಲ್ಲಿಯೇ ಭರಿಸಲಾಗುವುದು. ಖರೀದಿಯನ್ನು ಇ–ಟೆಂಡರ್ ಅಥವಾ ಜೆಮ್ ಪೋರ್ಟಲ್ ಮೂಲಕ ಮಾಡಲಾಗುವುದು.

ಈ ಹಿನ್ನೆಲೆಯಲ್ಲಿ ವಿಶ್ವವಿದ್ಯಾಲಯಕ್ಕೆ ಇನ್ನೊಂದು ಮಿನಿ ಬಸ್ ಖರೀದಿಸುವ ಪ್ರಸ್ತಾವನೆಯನ್ನು ಕಾರ್ಯನಿರ್ವಾಹಕ ಪರಿಷತ್ತಿನ ಪರಿಗಣನೆ ಮತ್ತು ಅನುಮೋದನೆಗಾಗಿ ಮಂಡಿಸಲಾಗಿದೆ.

**ನಿರ್ಣಯ**

ಪರಮಾರ್ಶನ ಟಿಪ್ಪಣಿಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ವಿಶ್ವವಿದ್ಯಾಲಯಕ್ಕೆ 30–35 ಸೀಟುಗಳ ಇನ್ನೊಂದು EICHER ಕಂಪನಿಯ ಮಿನಿ ಬಸ್ ಅನ್ನು ಅಂದಾಜು ರೂ. 20.00 ಲಕ್ಷಗಳ (ತೆರಿಗೆ ಹೊರತುಪಡಿಸಿ) ವೆಚ್ಚದಲ್ಲಿ ಖರೀದಿಸುವ ಪ್ರಸ್ತಾವನೆಗೆ ಕಾರ್ಯನಿರ್ವಾಹಕ ಪರಿಷತ್ತು ಅನುಮೋದನೆ ನೀಡಿತು.

**RESOLUTION**

In the light of the circumstances explained in the Reference Note, the Executive Council resolved to approve the proposal of purchasing one more Mini Bus of 30-35 seats from EICHER company at an approximate cost of Rs. 20.00 lakhs (excluding taxes).

**TABLE AGENDA:**

**Subject No. 4: To consider entering into MoU with the Centre for Multi-Disciplinary Development Research (CMDR), Dharwad – reg.**

**Reference Note:**

Prof. V.B. Annigeri, Director, Centre for Multi-Disciplinary Development Research (CMDR), Dharwad, vide his letter No. CMDRD/237/2019, dated July 4, 2019, has requested the University for collaboration as an intellectual partner in the Research and Academic domain of KSRDPR University.

It is stated that CMDR is one of the national level social science research institutes sponsored by the Indian Council of Social Science Research (ICSSR), Ministry of Human

Resource Development, Govt. of India and also funded by the Government of Karnataka. The main objective of this Centre is to undertake research and training activities related to specific socio-economic problems of Karnataka in particular and Indian economy in general.

Through collaboration (MoU) between CMDR and KSRDPR University, it is proposed to push forward the research, teaching and training agenda in the following areas for the benefit of both the Institutions:

1. Organizing Research Colloquium;
2. To undertake studies in the domain of Decentralized Governance;
3. Capacity Building and Training Programmes for young social science researchers in Research Methodology, Computer Application in social science research;
4. Refresher and Orientation courses for faculty members in social science;
5. Provide training to the Members of Gram Panchayat, Taluk Panchayat and Zilla Panchayats with a special focus on SC/ST members;
6. Faculty Exchange Programmes.

A draft MoU is also attached to this Note for kind perusal.

The matter is placed before the Executive Council for kind consideration and approval.

### ನಿರ್ಣಯ

ವಿಷಯದ ಬಗ್ಗೆ ಸವಿಸ್ತಾರ ಚರ್ಚೆಯ ನಂತರ, CMDR ಸಂಸ್ಥೆಯೊಂದಿಗೆ ಒಡಂಬಡಿಕೆ ಮಾಡಿಕೊಳ್ಳುವ ಪ್ರಸ್ತಾವನೆಯನ್ನು ಮತ್ತು ಕರಡು ಒಡಂಬಡಿಕೆ ಸ್ಮರಣಿಕೆಯನ್ನು (MoU) ಅನುಮೋದಿಸಲು ಹಾಗೂ ಅಗತ್ಯವಿದ್ದಲ್ಲಿ ಒಡಂಬಡಿಕೆ ಸ್ಮರಣಿಕೆಯನ್ನು ಸೂಕ್ತವಾಗಿ ತಿದ್ದುಪಡಿ ಮಾಡಿ ಅಂತಿಮಗೊಳಿಸಲು ಕುಲಪತಿಗಳಿಗೆ ಅಧಿಕಾರ ನೀಡಲು ಕಾರ್ಯನಿರ್ವಾಹಕ ಪರಿಷತ್ತು ನಿರ್ಣಯಿಸಿತು.

### RESOLUTION

After detailed discussion the Executive Council resolved to approve the proposal of entering into MoU between the KSRDPR University and Centre for Multi-disciplinary Development Research (CMDR), Dharwad along with the draft MoU and authorized the Vice Chancellor to finalize the same with suitable modifications, if necessary.

**TABLE AGENDA:**

**Subject No. 5: To consider the Proceedings of the Library Advisory Committee meeting held on 02-07-2019.**

**Reference Note:**

The Proceedings of the Library Advisory Committee meeting held on 02-07-2019 regarding purchase of books/e-books, journals/e-journals, softwares etc. are placed before the Executive Council for kind consideration and approval.

B. Thimmegowda

## ನಿರ್ಣಯ

ಕಾರ್ಯನಿರ್ವಾಹಕ ಪರಿಷತ್ತು ಗ್ರಂಥಾಲಯ ಸಮಿತಿ ಸಭೆಯ ನಡಾವಳಿಗಳನ್ನು ಪರಿಗಣಿಸಿ, ವಿಸ್ತೃತವಾಗಿ ಚರ್ಚಿಸಿತು. ಶ್ರೀ ಎನ್. ಶಿವಣ್ಣ ಇವರು ಗ್ರಂಥಾಲಯಗಳನ್ನು ಇಂಟರ್ ಲಿಂಕ್ ಮಾಡುವ ವಿಧಾನದ ಕುರಿತು ವಿಶ್ವವಿದ್ಯಾಲಯದ ಗ್ರಂಥಪಾಲಕರಿಂದ ಮಾಹಿತಿ ಪಡೆದುಕೊಂಡು, ಗ್ರಂಥಾಲಯಗಳನ್ನು ಇಂಟರ್ ಲಿಂಕ್ ಮಾಡಲು ತಿಳಿಸಿದರು. ಶ್ರೀ ಜಿ. ಬಿ. ಶಿವರಾಜು ಇವರು ಮಾತನಾಡುತ್ತ, ಮಹಾತ್ಮಾ ಗಾಂಧೀಜಿಯವರ ಸಂಪೂರ್ಣ ಪುಸ್ತಕಗಳ ಮಾಲೆಯನ್ನು ಗ್ರಂಥಾಲಯದಲ್ಲಿಡಲು ಹೇಳಿದರು. ಜೊತೆಗೆ e-Gandhi Museum ಸ್ಥಾಪನೆ ಮಾಡಲು ಮುಂದಿನ ದಿನಮಾನಗಳಲ್ಲಿ ಕ್ರಮಕೈಗೊಳ್ಳಲು ತಿಳಿಸಿದರು.

ಚರ್ಚೆಯ ನಂತರ ದಿನಾಂಕ 02-07-2019 ರಂದು ಜರುಗಿದ ಗ್ರಂಥಾಲಯ ಸಲಹಾ ಸಮಿತಿ ಸಭೆಯ ನಡಾವಳಿಗಳನ್ನು ಸರ್ವಾನುಮತದಿಂದ ಅನುಮೋದಿಸಲಾಯಿತು.

**<u>ಇತರೆ ವಿಷಯಗಳು:</u>**

1. ಶ್ರೀ ಬಿ.ಜಿ.ಗೋವಿಂದಪ್ಪ ಅವರು ಜಲ ಸಂರಕ್ಷಣೆ ಮಾಡುವುದರ ಕುರಿತಂತೆ ಮಾತನಾಡುತ್ತ ಆದ್ಯತೆಯ ಮೇರೆಗೆ ಮಳೆ ನೀರನ್ನು ಶೇಖರಣೆ ಮಾಡಬೇಕೆಂದು ತಿಳಿಸಿದರು. ಮುಂದುವರೆದು, ಸಬರಿಮತಿ ಆಶ್ರಮ ಕಟ್ಟಡದ ಎದುರು ಉದ್ದೇಶಿಸಿರುವ ನೀರಿನ ಸಂರಕ್ಷಣೆ ಕುರಿತಂತೆ ರಸ್ತೆ ನಿರ್ಮಿಸುವ ಸಮಯದಲ್ಲಿಯೇ ನೀರು ಶೇಖರಿಸಲು ಸೇತುವೆ ಕಟ್ಟಲು ಸೂಚಿಸಿದರು. ಅವರು ಮುಂದುವರೆದು, ಅಲೆಮಾರಿ ಜನಾಂಗದ ಹಾಗೂ ಆಯಾ ಪ್ರದೇಶಗಳು ಎದುರಿಸುತ್ತಿರುವ ನಿರ್ದಿಷ್ಟವಾದ ಸಮಸ್ಯೆಗಳ/ ವಿಷಯಗಳ ಅಧ್ಯಯನ ಮಾಡಿ ವರದಿ ನೀಡಿದರೆ ಉಪಯುಕ್ತ ಕಾಣಿಕೆ ನೀಡಿದಂತಾಗುತ್ತದೆ ಎಂದು ಅಭಿಪ್ರಾಯಪಟ್ಟರು.

2. ಮಳೆಗಾಲದ ಸಮಯದಲ್ಲಿ ವಿವಿಧ ಬಗೆಯ ಗಿಡ ಮರಗಳನ್ನು ನೆಟ್ಟು ಅವುಗಳ ನಿರ್ವಹಣೆ ಮಾಡಬೇಕೆಂದು ಡಾ. ಕೆ. ಎಂ. ಹನುಮಂತರಾಯಪ್ಪ ರವರು ತಿಳಿಸಿದರು. ಇದರಿಂದ ನೂತನ ಕ್ಯಾಂಪಸ್‌ನಲ್ಲಿ ಜೀವ ವೈವಿಧ್ಯತೆ ಹೆಚ್ಚಾಗುವುದಾಗಿ ಅಭಿಪ್ರಾಯ ವ್ಯಕ್ತಪಡಿಸಿದರು. ಅವರು ಮುಂದುವರೆದು, ಮಹಿಳಾ ಆರೋಗ್ಯದ ಬಗ್ಗೆ ಅರಿವು, ಬಾಲ ವಿವಾಹದಿಂದಾಗುವ ಹಾನಿಗಳು ಇತ್ಯಾದಿಗಳ ಕುರಿತು ಅರಿವು ಮೂಡಿಸುವ ಕುರಿತು ಮಾತನಾಡಿದರು.

3. ಶ್ರೀ ಆರ್. ಎಸ್. ದೇಶಪಾಂಡೆಯವರು ಮಾತನಾಡುತ್ತ, ಗಾಳಿ ಮಳೆಗೆ ಸುಲಭವಾಗಿ ಬೀಳುವಂತಹ ಗಿಡ ಮರಗಳನ್ನು ನೆಡುವುದರ ಕುರಿತು ಜಾಗೃತ ವಹಿಸಲು ತಿಳಿಸಿದರು. ಅವರು Reverse Learning Process ಬಗ್ಗೆ ಮಾತನಾಡುತ್ತ ಕ್ಷೇತ್ರ ಭೇಟಿಯ ಸಮಯದಲ್ಲಿ ಗ್ರಾಮಸ್ಥರಿಂದ ವಿದ್ಯಾರ್ಥಿಗಳು ಕಲಿತು ಅದನ್ನು ಉಪನ್ಯಾಸಕರಿಗೆ/ ಸಂಘ ಸಂಸ್ಥೆಗಳಿಗೆ ಮುಟ್ಟಿಸುವ ಜವಾಬ್ದಾರಿ ವಹಿಸಿಕೊಳ್ಳಬೇಕೆಂದು ಅಭಿಪ್ರಾಯಪಟ್ಟರು. ಇದನ್ನು MoU ಮಾಡಿಕೊಳ್ಳುವ ಸಂಸ್ಥೆಗಳ ಸಹಯೋಗದೊಂದಿಗೆ ನೆರವೇರಿಸಬಹುದಾಗಿಯೂ ತಿಳಿಸಿದರು.

4. ಡಾ. ಪ್ರಕಾಶ ಭಟ್ ಅವರು, ವಿದ್ಯಾರ್ಥಿಗಳ ಕ್ಷೇತ್ರ ಭೇಟಿಯನ್ನು ರಾಜ್ಯದ/ದೇಶದ ವಿವಿಧ ಭಾಗಗಳಲ್ಲಿ ಹಮ್ಮಿಕೊಂಡರೆ ವಿವಿಧ ವ್ಯವಸ್ಥೆಗಳ ಅರಿವು ವಿದ್ಯಾರ್ಥಿಗಳಿಗೆ ಹಾಗೂ ಉಪನ್ಯಾಸಕರಿಗೆ ದೊರಕುತ್ತದೆ ಎಂದು ತಿಳಿಸಿದರು. ಅವರು ಮುಂದುವರೆದು, ಬೇರು ಮಟ್ಟದಲ್ಲಿ ಸಂಶೋಧನೆ ಕೈಗೊಳ್ಳುತ್ತಿರುವ ಸಂಸ್ಥೆಗಳಲ್ಲದೇ, ಬೇರು ಮಟ್ಟದಲ್ಲಿ ವಿವಿಧ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುತ್ತಿರುವ ಸಂಸ್ಥೆಗಳೊಂದಿಗೆ ಜತೆಗೂಡಿ ಕಾರ್ಯನಿರ್ವಹಿಸಿದರೆ ವಿಶ್ವವಿದ್ಯಾಲಯಕ್ಕೆ ಹೆಚ್ಚಿನ ಮಾನ್ಯತೆ ದೊರಕುವುದಾಗಿ ತಿಳಿಸಿದರು.

ಕುಲಪತಿಗಳು ಈ ಸಲಹೆಗಳಿಗೆ ವಂದಿಸುತ್ತಾ, ಇಲ್ಲಿಯವರೆಗೆ ಈ ನಿಟ್ಟಿನಲ್ಲಿ ಮಾಡಿರುವ ಪ್ರಯತ್ನಗಳ ಬಗೆಗೆ ಹಾಗೂ ಮುಂದಿನ ಕ್ರಿಯಾ ಯೋಜನೆಗಳ ವಿವರ ನೀಡಿದರು. ಈ ಸಲಹೆಗಳಂತೆ ಈ ನಿಟ್ಟಿನಲ್ಲಿ ವಿಶ್ವವಿದ್ಯಾಲಯ ಇನ್ನೂ ಹೆಚ್ಚು ಶ್ರಮವಹಿಸುವುದು ಎಂದು ತಿಳಿಸಿದರು.

ಕುಲಸಚಿವರು
ಪದನಿಮಿತ್ತ ಸದಸ್ಯ ಕಾರ್ಯದರ್ಶಿ

ಕುಲಪತಿಗಳು
ಸಭಾಧ್ಯಕ್ಷರು